# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **653**

ಸದಸ್ಯರ ಹೆಸರು : ಶ್ರೀ. ಐವನ್ ಡಿ 'ಸೋಜಾ
(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : 12-03-2025

| **ಪ್ರಶ್ನೆ** | | **ಉತ್ತರ** |
|---|---|---|
| (ಅ) | ಅಪಘಾತಗಳನ್ನು ನಿಯಂತ್ರಿಸಲು ಸಾರಿಗೆ ಇಲಾಖೆ ತೆಗೆದುಕೊಂಡ ಕ್ರಮಗಳೇನು: | ಅಪಘಾತಗಳನ್ನು ನಿಯಂತ್ರಿಸಲು ಸಾರಿಗೆ ಇಲಾಖೆಯಿಂದ ಕೈಗೊಂಡ ಕ್ರಮದ ವಿವರಗಳು ಕೆಳಕಂಡಂತಿವೆ:-<br><br>ಪ್ರತಿ ವರ್ಷ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ವತಿಯಿಂದ ಸಾರ್ವಜನಿಕರಲ್ಲಿ ರಸ್ತೆ ಸುರಕ್ಷತಾ ಅರಿವು ಮೂಡಿಸುವ ನಿಟ್ಟಿನಲ್ಲಿ" ಅತಿ ವೇಗದ ಚಾಲನೆ" ಯಿಂದ ಆಗುವ ಅಪಘಾತಗಳ ದುಷ್ಪರಿಣಾಮಗಳ ಕುರಿತು ಸಮೂಹ ಮಾಧ್ಯಮ (Mass media campaign) ಮೂಲಕ ಹಾಗೂ ಸಾಮಾಜಿಕ ಜಾಲತಾಣಗಳಾದ Twitter, Instagram, Facebook, YouTube, ಚಲನಚಿತ್ರ ಮಂದಿರಗಳಲ್ಲಿ, Radio Jingles, ದೂರದರ್ಶನ ವಾಹಿನಿಗಳು, ನ್ಯೂಸ್ ಪೇಪರ್ಸ್, Hoarding/ Digital Screens at Strategic Location ಗಳ ಮೂಲಕ ರಸ್ತೆ ಸುರಕ್ಷತೆ ಕುರಿತು ಜಾಗೃತಿ ಮೂಡಿಸಲು ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ.<br><br>ಬೆಂಗಳೂರು ನಗರದ 40 ಪ್ರದೇಶಗಳಲ್ಲಿ ರಸ್ತೆ ಸುರಕ್ಷತಾ ವಿಷಯದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಕೈಗೊಳ್ಳಲಾಗಿರುತ್ತದೆ. ಚಾಲನಾ ಅನುಜ್ಞಾ ಪತ್ರ ನೀಡುವ ಪೂರ್ವದಲ್ಲಿ ಅಭ್ಯರ್ಥಿಗಳನ್ನು ಪರೀಕ್ಷೆಗೆ ಒಳಪಡಿಸುವ ನಿಟ್ಟಿನಲ್ಲಿ 50 LMV Driving simulator ಗಳನ್ನು 2022-23, 2023-24ನೇ ಸಾಲಿನಲ್ಲಿ ಪ್ರಾದೇಶಿಕ / ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಅಳವಡಿಸಲಾಗಿದೆ ಹಾಗೂ 32 ಸಹಾಯಕ / ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ರಸ್ತೆ ಸುರಕ್ಷತಾ ಜಾಗೃತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.<br><br>2022-2023, 2023-24 ನೇ ಸಾಲಿನಲ್ಲಿ ಮದ್ಯಪಾನ ಸೇವನೆ ಮಾಡಿ ವಾಹನ ಚಲಾಯಿಸುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ 347 ಬ್ರೆತ್ ಅನಲೈಸರ್‌ಗಳನ್ನು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದಿಂದ ಖರೀದಿಸಿ ರಾಜ್ಯದ ಎಲ್ಲಾ ಸಹಾಯಕ / ಪ್ರಾದೇಶಿಕ ಸಾರಿಗೆ ಕಛೇರಿಗಳಿಗೆ |

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>ಹಾಗೂ ಸಾರಿಗೆ ನಿಗಮಗಳಾದ KSRTC, KKRTC, NWRTC, BMTCಗೆ ಹಸ್ತಾಂತರಿಸಲಾಗಿದೆ. ಹೆಲ್ಮೆಟ್ ಧರಿಸುವ ಪ್ರಾಮುಖ್ಯತೆಯನ್ನು ಹಾಗೂ ಅತಿವೇಗದ ಚಾಲನೆಯಿಂದಾಗುವ ದುಷ್ಪರಿಣಾಮಗಳ ಕುರಿತು ಹಾಗೂ ರಸ್ತೆ ಸುರಕ್ಷತೆಯ ಕುರಿತು ಸಾರ್ವಜನಿಕರಿಗೆ ಅರಿವು ಉಂಟು ಮಾಡುವ ನಿಟ್ಟಿನಲ್ಲಿ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ- ಜನವರಿ 2024ರಲ್ಲಿ ರಸ್ತೆ ಸುರಕ್ಷತಾ ಅಭಿಯಾನವನ್ನು ಕೈಗೊಳ್ಳಲಾಗಿರುತ್ತದೆ.<br><br>ಇದಲ್ಲದೆ, ಕೇಂದ್ರ ಸರ್ಕಾರದ ರಸ್ತೆ ಮತ್ತು ಹೆದ್ದಾರಿಗಳ ಸಚಿವಾಲಯದ ನಿರ್ದೇಶನದಂತೆ ಮೋಟಾರು ವಾಹನ ಕಾಯ್ದೆ 1988ರ ಕಲಂ 136A ಮತ್ತು ಕೇಂದ್ರ ಮೋಟಾರು ವಾಹನ ನಿಯಮಗಳು 1989ರ ನಿಯಮ 167Aನ್ನು ಜಾರಿಗೊಳಿಸುವ ದಿಸೆಯಲ್ಲಿ, Electronic Monitoring and Enforcement of Road Safety ರಡಿ Black Spot ಇರುವ ರಾಷ್ಟ್ರೀಯ / ರಾಜ್ಯ ಹೆದ್ದಾರಿಗಳಲ್ಲಿ ಮತ್ತು ಹೆಚ್ಚಿನ ಸಂಚಾರ ಸಾಂದ್ರತೆಯ ಜಂಕ್ಷನ್‌ಗಳಲ್ಲಿ (ಒಟ್ಟು 20 ಸ್ಥಳಗಳಲ್ಲಿ) AI ಆಧಾರಿತ ಕ್ಯಾಮರಾಗಳನ್ನು ಅಳವಡಿಸಲಾಗುತ್ತಿದೆ.<br><br>ಸಾರಿಗೆ ಇಲಾಖೆಯು ಈಗಾಗಲೇ ರಾಜ್ಯದ 06 ಟೋಲ್ ಪ್ಲಾಜಾಗಳಲ್ಲಿ ಸ್ವಯಂಚಾಲಿತ ಸ್ಮಾರ್ಟ್ ರಸ್ತೆ ಸುರಕ್ಷತೆ ಜಾಗೃತಿ ಮತ್ತು ರಸ್ತೆ ಸುರಕ್ಷತೆಯ ಬಗ್ಗೆ ತಿಳುವಳಿಕೆ ಮೂಡಿಸುವ (automated smart road safety awareness and road safety sensitization) ಯೋಜನೆಯನ್ನು ಜಾರಿಗೊಳಿಸಲಾಗಿದೆ.</td></tr>
<tr><td>ಆ)</td><td>ರಾಜ್ಯದಲ್ಲಿ ಎಷ್ಟು ವಾಹನ ಪರೀಕ್ಷಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ ಮತ್ತು ಎಷ್ಟು ನಿರ್ಮಾಣ ಹಂತದಲ್ಲಿವೆ; (ಸ್ಥಳಗಳು ಮತ್ತು ವೆಚ್ಚಗಳ ವಿವರ ನೀಡುವುದು)</td><td>ರಾಜ್ಯದಲ್ಲಿ 03 ವಾಹನ ಪರೀಕ್ಷಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ ಒಂದು ನಿರ್ಮಾಣ ಹಂತದಲ್ಲಿದೆ.
<table>
<tr><th>ಸ್ಥಳ</th><th>ನಿರ್ಮಾಣ ವೆಚ್ಚ (ಲಕ್ಷಗಳಲ್ಲಿ</th></tr>
<tr><td>ನೆಲಮಂಗಲ</td><td>1500.00 (ಕೇಂದ್ರ ಸರ್ಕಾರದ ಯೋಜನೆ)</td></tr>
<tr><td>ಮೈಸೂರು</td><td>1578.21</td></tr>
<tr><td>ಧಾರವಾಡ</td><td>1545.71</td></tr>
<tr><td>ಚೊಕ್ಕನಹಳ್ಳಿ</td><td>849.00 (ಪ್ರಗತಿಯಲ್ಲಿದೆ)</td></tr>
</table>
ಅಲ್ಲದೆ PPP ಅಡಿ DBFOT ಮಾದರಿಯಲ್ಲಿ 12 ಸ್ಥಳಗಳಲ್ಲಿ ಹಾಗೂ BOO ಮಾದರಿಯಲ್ಲಿ 20 ಸ್ಥಳಗಳಲ್ಲಿ ವಾಹನ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದು ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.</td></tr>
</table>

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಇ)</td><td>ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲೆಕ್ಟ್ರಾನಿಕ್ ಚಾಲಕ ಪರೀಕ್ಷಾ ಟ್ರ್ಯಾಕ್‌ಗಳು ಎಷ್ಟು; ನಿರ್ಮಾಣ ಹಂತದಲ್ಲಿರುವ ಟ್ರ್ಯಾಕ್‌ಗಳ ಸಂಖ್ಯೆ ಎಷ್ಟು;</td><td>ರಾಜ್ಯದಲ್ಲಿ 07 ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳು ಕಾರ್ಯನಿರ್ವಹಿಸುತ್ತಿವೆ.<br>03ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳಿಗೆ ಸೆನ್ಸಾರ್ ಅಳವಡಿಕೆ ಕಾರ್ಯ ಪ್ರಗತಿಯಲ್ಲಿದೆ.<br>14 ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳಿಗೆ ಸೆನ್ಸಾರ್ ಅಳವಡಿಸಲು ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.<br>11 ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳ ಕಾಮಗಾರಿಗಳು ಪ್ರಗತಿಯಲ್ಲಿದೆ.<br>07 ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳ ಕಾಮಗಾರಿಗಳು ಪ್ರಾರಂಭ ಗೊಳ್ಳಬೇಕಿದೆ.</td></tr>
<tr><td>ಈ)</td><td>ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಚಾಲಕ ತರಬೇತಿ ಸಂಸ್ಥೆಗಳು ಎಷ್ಟು; (ಸ್ಥಳಗಳು ಮತ್ತು ವೆಚ್ಚಗಳ ವಿವರ ನೀಡುವುದು)</td><td>ರಾಜ್ಯ ಸರ್ಕಾರದ ಅನುದಾನದಿಂದ 04 ಸ್ಥಳಗಳಲ್ಲಿ ಭಾರಿ ವಾಹನ ಚಾಲಕ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಿ, ಕಾರ್ಯಾಚರಣೆ ಗೊಳಿಸಲಾಗಿದೆ ಹಾಗೂ ಒಂದು ನಿರ್ಮಾಣ ಹಂತದಲ್ಲಿದೆ.
<table>
<tr><th>ಸ್ಥಳ</th><th>ನಿರ್ಮಾಣ ವೆಚ್ಚ (ಲಕ್ಷಗಳಲ್ಲಿ)</th></tr>
<tr><td>ಬೆಂಗಳೂರು ಸಿಂಗನಾಯಕನಹಳ್ಳಿ</td><td>1538.00</td></tr>
<tr><td>ಧಾರವಾಡ</td><td>1538.00</td></tr>
<tr><td>ಮಂಗಳೂರು</td><td>1500.00</td></tr>
<tr><td>ಕಲಬುರಗಿ</td><td>1500.00</td></tr>
<tr><td>ಶಿವಮೊಗ್ಗ (ಪ್ರಗತಿಯಲ್ಲಿದೆ)</td><td>600.00</td></tr>
</table></td></tr>
<tr><td>ಉ)</td><td>ಮಂಗಳೂರಿನಲ್ಲಿ ವಾಹನ ಪರೀಕ್ಷಾ ಕೇಂದ್ರ, ಎಲೆಕ್ಟ್ರಾನಿಕ್ ಚಾಲಕ ಪರೀಕ್ಷಾ ಟ್ರ್ಯಾಕ್ ಮತ್ತು ಚಾಲಕ ತರಬೇತಿ ಸಂಸ್ಥೆಯ ಅನುಷ್ಠಾನದ ಸ್ಥಿತಿಗತಿಗಳೇನು? (ವಿವರ ನೀಡುವುದು)</td><td>ಮಂಗಳೂರಿನಲ್ಲಿನ ಭಾರಿ ವಾಹನ ಚಾಲಕ ತರಬೇತಿ ಸಂಸ್ಥೆಯು ಕಾರ್ಯಾರಂಭಿಸಿರುತ್ತದೆ.<br><br>ಮಂಗಳೂರಿನ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥದ ಎಲ್ಲಾ ಕಾಮಗಾರಿಗಳು ಮತ್ತು ಸೆನ್ಸಾರ್ ಅಳವಡಿಕೆ ಕಾರ್ಯಗಳು ಪೂರ್ಣಗೊಂಡು ಉದ್ಘಾಟನೆಗೆ ಸಿದ್ಧವಾಗಿದೆ.</td></tr>
</table>

**ಟಿಡಿ 14 ಟಿಡಿಕ್ಯೂ 2025**

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು